ಶ್ರೀ ಎಸ್. ಕರಿಯಪ್ಪ.—ಉತ್ತರದಲ್ಲಿ ಒಂಬತ್ತು ರಸ್ತೆಗಳನ್ನು ಮಾಡುವುದಾಗಿ ಹೇಳಿದೆ. ಅದರಂತೆ ಬೇರೆ ರಸ್ತೆಗಳನ್ನು ಮಾಡುವ ಪ್ರಪೋಸಲ್ ಇದೆಯೆ?

ಶ್ರೀ ಟಿ. ಚನ್ನಯ್ಯ.—ಇನ್ನೂ ನಾಲ್ಕು ಮಾಡಬೇಕೆಂದು ಹಣ ಒದಗಿಸಿದೆ.

ಶ್ರೀ ಎಸ್. ಕರಿಯಪ್ಪ.—ಹಿಂದೆ ಮಂಜೂರು ಮಾಡಿದೆಯೆಂದು ಹೇಳಿದ್ದ ಕೆಲವು ರಸ್ತೆಗಳನ್ನು ಮುಂದುವರಿಸಲು ಎಸ್ಟಿಮೇಟ್ ವಗೈರೆ ಬಂದಿಲ್ಲವೆ?

ಶ್ರೀ ಟಿ. ಚನ್ನಯ್ಯ.—ತಿಳಿದು ಹೇಳುತ್ತೇನೆ.

ಶ್ರೀ ಎಸ್. ಕರಿಯಪ್ಪ.—ಈಗ ವಿಚಾರಿಸಿ ಆ ರಸ್ತೆಗಳನ್ನು ಮುಂದುವರಿಸಲು ಪ್ರಯತ್ನಮಾಡುತ್ತೀರಾ?

ಶ್ರೀ ಟಿ. ಚನ್ನಯ್ಯ.—ಸಾಧ್ಯವಾದರೆ ಮಾಡೋಣ.

Kadur-Maravanji Road.

Q.—583. **Sri Y. M. CHANDRASEKHARIAH** (Kadur).—

Will the Government be pleased to state :—

(*a*) the year in which the work of Kadur-Maravanji Road of Kadur Taluk was commenced ;

(*b*) the amount expended on this road till now (information to be given yearwar) ;

(*c*) the number of years and the amount required to complete the work and make it a pucca road ;

(*d*) the length of this road ?

A.—**Sri T. CHANNIAH** (Minister for Public Health and Local Self-Government).—

(*a*) 1941-42.

(*b*)

			Rs.	a.	p.
June	1942	...	5,867	14	0
,,	1943	...	2,192	8	0
,,	1944	...	768	15	0
,,	1945	...	188	2	0
,,	1946	...	1,358	9	0
,,	1947	...	2,151	8	0
,,	1948	...	6,588	12	0
,,	1949	...	11,405	12	0
,,	1950	...	17,471	8	0
March	1951	...	11,173	6	0
,,	1952	...	3,118	1	0
,,	1953	...	4,530	13	0
,,	1954	...	13,266	0	6
,,	1955	...	5,877	12	0
January	1956	...	1,400	10	0
Petty Works		...	1,363	5	0
Establishment, Tools and Plant Charges.			3,693	1	6
	Total	...	92,416	9	0

(*c*) It may take about 2 years. An estimate for Rs. 1·3 lakhs is under scrutiny.

(*d*) 22¼ miles.

ಶ್ರೀ ವೈ. ಎಂ. ಚಂದ್ರಶೇಖರಯ್ಯ (ಕಡೂರು).—ಮರವಂಜಿ ರಸ್ತೆ 1941-42ನೆಯ ಸಾಲಿನಲ್ಲಿ ಪ್ರಾರಂಭವಾಗಿ ಈ ದಿವಸದವರೆಗೂ ಪೂರ್ಣವಾಗದಿರುವುದಕ್ಕೆ ಕಾರಣವೇನು?

ಶ್ರೀ ಟಿ. ಚನ್ನಯ್ಯ.—ಈಗಾಗಲೆ 92,416-9-0 ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಇನ್ನೂ ಒಂದು ಲಕ್ಷ ಮೂರು ಸಾವಿರ ರೂಪಾಯಿಗಳಿಗೆ ಅಂದಾಜು ತಯಾರಾಗಿ ಸ್ಕೂಟಿನಿಗೆ ಹೋಗಿದೆ. ಈ ಹಣ ಮಂಜೂರು ಮಾಡಿದ ತಕ್ಷಣ ಬಾಕಿಯಿರುವ ರಸ್ತೆ ಪೂರ್ಣ ಮಾಡಲು ಸರ್ಕಾರ ಕ್ರಮ ಕೈಕೊಳ್ಳುತ್ತದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಪ್ರಾರಂಭವಾಗಿ 15 ವರ್ಷಗಳಾಗಿದ್ದರೂ ಇಲ್ಲಿನವರೆಗೂ ಆ ರಸ್ತೆಯನ್ನು ಪೂರ್ಣಮಾಡದಿರುವುದು ಸರಿಯಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಟಿ. ಚನ್ನಯ್ಯ.—ಬಹಳ ವರ್ಷವಾಗಿದೆಯೆಂಬುದು ಗಮನಕ್ಕೆ ಬಂದಿದೆ. ಏಕೆ ನಿಧಾನವಾಗಿದೆಯೆಂಬುದನ್ನು ಸಂಬಂಧಪಟ್ಟ ಅಧಿಕಾರಿಗಳಲ್ಲಿ ವಿಚಾರ ಮಾಡುತ್ತಿದ್ದೇವೆ. ಸಕಾರಣ ತಿಳಿದನೋಲೆ ಸ್ಪೆಷಲ್ಲಾಗಿ ತಿಳಿವಳಿಕೆ ಕೊಟ್ಟು ಜಾಗ್ರತೆ ಕೆಲಸ ಮಾಡಲು ಏರ್ಪಾಡು ಮಾಡುತ್ತೇವೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಈಗ ಈ ಕೆಲಸವನ್ನು ಮಂಜೂರು ಮಾಡಿ ಜಾಗ್ರತೆ ಮಾಡಿಸುತ್ತೀರಾ?

ಶ್ರೀ ಟಿ. ಚನ್ನಯ್ಯ.—ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ. ಹುಚ್ಚೇಗೌಡ.—92 ಸಾವಿರ ಚಿಲ್ಲರೆ ರೂಪಾಯಿಗಳನ್ನು ಪಬ್ಲಿಕ್ ವರ್ಕ್ಸ್ ಇಲಾಖೆಯವರು ಖರ್ಚುಮಾಡಿರುವರೆ ಅಥವಾ ಡಿಸ್ಟ್ರಿಕ್ಟ್ ಬೋರ್ಡಿನವರು ಖರ್ಚು ಮಾಡಿರುವರೆ?

ಶ್ರೀ ಟಿ. ಚನ್ನಯ್ಯ.—ಪಬ್ಲಿಕ್ ವರ್ಕ್ಸ್ ಇಲಾಖೆಯವರು ಖರ್ಚು ಮಾಡಿದ್ದಾರೆ.

ಶ್ರೀ ಬಿ. ಹುಚ್ಚೇಗೌಡ.—ಈ 92 ಸಾವಿರ ಚಿಲ್ಲರೆಯಲ್ಲಿ ಒಂಭತ್ತು ಸಾವಿರ ರೂಪಾಯಿ ಕೆಲಸ ಕೂಡ ಆಗಿಲ್ಲವೆಂಬುದನ್ನು ವಿಚಾರ ಮಾಡುತ್ತೀರಾ?

ಶ್ರೀ ಟಿ. ಚನ್ನಯ್ಯ.—ಖರ್ಚಾಗಿರುವುದಕ್ಕೇ ಕೊಟ್ಟಿರುವುದು. ತಾವು ಹೇಳಿದಂತೆ ಆಗಿಲ್ಲ.

District Board Roads, Chickmagalur District (Acquisition and compensation).

Q.—584. **Sri Y. M. CHANDRASEKHARIAH** (Kadur).—

Will the Government be pleased to state :—

(*a*) the length of District Board Roads at present in Chickmagalur District (information to be given talukwar) ;

(*b*) the District Board Roads in respect of which acquisition of lands has been completed in the district (information to be given talukwar) ;

(*c*) the roads in respect of which raiyats are given compensation after acquisition (information to be given talukwar) ;

(*d*) the roads in respect of which compensation is yet to be paid to the raiyats (information to be given talukwar) ?

A.—**Sri T. CHANNIAH** (Minister for Public Health and Local Self-Government).—

(*a*) 498 miles and 5 furlongs.

	Name of Taluk	*Miles*	*Furlongs*
1.	Chickmagalur ...	106	7
2.	Mudigere ...	95	1
3.	Koppa ...	127	6
4.	Narasimharajapura.	37	0
5.	Tarikere ...	68	2
6.	Kadur ...	63	5

(*b*) No acquisition of land was made during recent years except in the case of Ajjampura-Bukkambudi Road.

(*c*) Only in the case of Ajjampura-Bukkambudi Road acquisition of land was made and final award is not yet passed.

(*d*) Tarikere Taluk. Ajjampura-Bukkambudi Road.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಚಿಕ್ಕಮಗಳೂರು ಜಿಲ್ಲೆ ಡಿಸ್ಟ್ರಿಕ್ಟ್ ಬೋರ್ಡ್ ರಸ್ತೆಯಲ್ಲಿ ಸುಮಾರು 120 ಮೈಲುಗಳಿಗೆ ಅಕ್ವಿಜಿಷನ್ ರಿಕಾರ್ಡು ನಡೆಸಿ ಪರಿಹಾರ ಕೊಟ್ಟಿಲ್ಲದಿರುವುದಕ್ಕೆ ಕಾರಣವೇನು?

ಶ್ರೀ ಟಿ. ಚನ್ನಯ್ಯ.—ಅಜ್ಜಂಪುರ—ಬುಕ್ಕಾಂಬುದಿ ರಸ್ತೆ ಬಗ್ಗೆ ಅಕ್ವಿಜಿಷನ್ ಆಗಿ ಹಣ ಕೊಡಲಾಗಿದೆ. ಕಾಂಪೆನ್ಸೇಷನ್ ಅವಾರ್ಡು ಮಾಡಿಲ್ಲ. ಜಾಗ್ರತೆ ಮಾಡಿ ಎಂದು ಹೇಳಿದೆ. ಭಾಕಿ ವಿಚಾರ ತಿಳಿದು ಬಂದಿಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಕಡೂರು-ಮಂಗಳೂರು ರಸ್ತೆ 1941 ರಲ್ಲಿ ಪ್ರಾರಂಭವಾಗಿದ್ದರೂ ಈ ದಿವಸದವರೆಗೂ ಅಕ್ವಿಜಿಷನ್ ರಿಕಾರ್ಡು ನಡೆಯದಿರುವುದಕ್ಕೆ ಕಾರಣವೇನು ? 27ನೆಯ ಮೈಲಿಯಲ್ಲಿ 15 ವರ್ಷಗಳಾದರೂ ಅಕ್ವಿಜಿಷನ್ ರಿಕಾರ್ಡು ಆಗಿಲ್ಲದಿರುವುದಕ್ಕೆ ಕಾರಣವೇನು ?

ಶ್ರೀ ಟಿ. ಚನ್ನಯ್ಯ.—ಸಾಮಾನ್ಯವಾಗಿ ಜಮೀನ್ದಾರರು ಅಕ್ವೈರ್ ಮಾಡಿಕೊಳ್ಳುವುದಕ್ಕೆ ತಕರಾರು ಹಾಕುವುದರಿಂದ ಸ್ವಲ್ಪ ನಿಧಾನವಾಗಿದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಜಮೀನು ದಾರರು ತಕರಾರು ಮಾಡದೆ ಅವರೇ ಕೇಳುತ್ತಿದ್ದರೂ ಈ ದಿವಸದವರೆಗೂ ಅಕ್ವಿಜಿಷನ್ ಆಗದಿರುವುದಕ್ಕೆ ಕಾರಣವೇನು ?

ಶ್ರೀ ಟಿ. ಚನ್ನಯ್ಯ.—ರಿಕಾರ್ಡ್ ತರಿಸಿ ನೋಡಿ ಕಾರಣಗಳನ್ನು ಆಮೇಲೆ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಈ ದಿವಸದ ವರೆಗೂ ಕಂದಾಯ ತೆಗೆದುಕೊಳ್ಳುತ್ತಿದ್ದಾರೆ, ಅಕ್ವಿಜಿಷನ್ ಆಗಿಲ್ಲ. ಕಂದಾಯ ಕೂಡ ಮಾಫಿ ಮಾಡಿದ್ದರೆ ರೈತರ ಗತಿಯೇನು ?

ಶ್ರೀ ಟಿ. ಚನ್ನಯ್ಯ.—ಸೂಕ್ತ ..ಕಾರ್ಯಕ್ರಮ ತೆಗೆದುಕೊಂಡು ಜಾಗ್ರತೆ ರೆಗ್ಯುಲರೈಸ್ ಮಾಡುತ್ತೇವೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಪೂರ್ಣವಾಗಿ ಅಕ್ವೈರ್ ಆಗಿಲ್ಲವೆಂದು ಹೇಳಿದರು. ಜಮೀನು ಕಂದಾಯ ವಸೂಲು ಮಾಡುತ್ತಿದ್ದೀರಾ ?

ಶ್ರೀ ಟಿ. ಚನ್ನಯ್ಯ.—ನೋಟೀಸ್ ಬೇಕು.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಅಕ್ವಿಜಿಷನ್ ರಿಕಾರ್ಡು ಮುಗಿದು ಹಣ ಪಾವತಿಯಾಗದಿದ್ದರೆ ಕಂದಾಯ ಕೊಡಬೇಕಲ್ಲವೆ ?

ಶ್ರೀ ಟಿ. ಚನ್ನಯ್ಯ.—ಈಗ ಆ ವಿವರವಿಲ್ಲದ್ದರಿಂದ ಅದನ್ನು ಹೇಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಈಗ ದೇಶದಲ್ಲಿ ಲಕ್ಷಾಂತರ ಎಕರೆ ಜಮೀನಿನಲ್ಲಿ ರಸ್ತೆ ಮಾಡಿದ್ದಾರೆ. ಜಮೀನು ಅಕ್ವೈರ್ ಆಗದಿದ್ದರೆ ಜಮೀನು ಕಂದಾಯ ಸರ್ಕಾರ ಕೊಡಬೇಕೇ ಅಥವಾ ರೈತರು ಕೊಡಬೇಕೇ ?

ಶ್ರೀ ಟಿ. ಚನ್ನಯ್ಯ.—ರೈತರೇ ಕೊಡಬೇಕು.

9 A.M.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಸರ್ಕಾರದ ವರು ಇವುಗಳ ಮೇಲೆ ಹಣ ಹಾಕಿ ಕೆಲಸ ಮಾಡಿಸಿದ ಮೇಲೆ ಈ ಭೂಮಿ ಕಂದಾಯವನ್ನು ಯಾರು ಕೊಡಬೇಕು ?

Sri T. CHANNIAH.—I have not got the details with me now. If the Hon'ble Member wants them I will furnish later.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ತಮ್ಮಲ್ಲಿ ಈಗ ಆ ವಿವರಗಳಿಲ್ಲದಿದ್ದರೆ ತಾವು ತರಿಸಿಕೊಂಡು ಹೇಳಬೇಕು. ಈಗ ತಾವು ಆ ಭೂಮಿಗಳನ್ನು ತೆಗೆದುಕೊಂಡು ಅಲ್ಲಿ ರಸ್ತೆ ಮಾಡಿಸಿದನಂತರ ಆ ಭೂಮಿಯ ಕಂದಾಯವನ್ನು ಸರ್ಕಾರ ಕೊಡಬೇಕೇ ಅಥವಾ ಅದನ್ನು ಆ ಜಮೀನು ಕಳೆದುಕೊಂಡ ರೈತ ಕೊಡಬೇಕೇ ? Correct information must be given by the Government.

Sri A. G. RAMACHANDRA RAO.—It will be examined.

ಶ್ರೀ ಎಸ್. ಸಿದ್ದಪ್ಪ.—ಈಗ ನಂಸ್ಥಾನಾ ಮಳೆ ಮಾಡಿಸಿರತಕ್ಕ ಎಲ್ಲಾ ಜಿಲ್ಲಾ ಬೋರ್ಡು ರಸ್ತೆಗಳೂ ಹೀಗೆ ಆಗಿರುತ್ತವೆಯೇ ?

ಅಧ್ಯಕ್ಷರು.—ಆ ವಿಚಾರ ಗೊತ್ತಿಲ್ಲ.

ಶ್ರೀ ಎಸ್. ಸಿದ್ದಪ್ಪ.—ಈ ರಸ್ತೆ ಸೌಕರ್ಯವನ್ನು ಜನಗಳಿಗೆ ಒದಗಿಸುತ್ತಿರುವುದರಿಂದ ಜಿಲ್ಲಾ ಬೋರ್ಡುಗಳು ಅಕ್ವೈರ್ ಮಾಡಿಕೊಳ್ಳುವ ಯಾವ ರಸ್ತೆ ಜಮೀನಿಗೂ ಹೀಗೆ ಡುಡ್ಡು ಕೊಟ್ಟು ಅಕ್ವೈರ್ ಮಾಡಿಕೊಂಡಿಲ್ಲವಲ್ಲವೇ ?

ಶ್ರೀ ಟಿ. ಚನ್ನಯ್ಯ.—ಪರಿಹಾರ ಕೊಡದೆ ನಾವು ಯಾವ ಜಮೀನನ್ನೂ ಪಡೆದಿಲ್ಲ. ಆದರೆ ಕೊಂಚ ನಿಧಾನವಾಗಿರಬಹುದು. ಆ ಜನರಿಗೆಲ್ಲಾ ಬೇಗ ಪರಿಹಾರ ದ್ರವ್ಯವನ್ನು ಒದಗಿಸಿತಕ್ಕ ಏರ್ಪಾಡನ್ನು ಮಾಡುತ್ತೇವೆ.